## ಘಟಕ 1

## ಭಾರತದಲ್ಲಿ ಕೃಷಿ

- **'ಭಾರತದ ಆರ್ಥಿಕತೆಯ ಬೆನ್ನೆಲುಬು'** ಆಗಿರುವ ಕೃಷಿಯು, ಭಾರತದ ಬಹು ಸಂಖ್ಯಾತ ಜನರ ಪ್ರಮುಖ ಕಸುಬಾಗಿದೆ.
- ಗ್ರಾಮಿಣ ಭಾಗದ 70% ಜನರು & ದೇಶದ 58% ಜನರು ಕೃಷಿಯನ್ನೆ ಮೂಲ ಕಸುಬನ್ನಾಗಿ ಮಾಡಿಕೊಂಡು ಜೀವಿಸುತ್ತಿದ್ದಾರೆ.
- 2016 ರ CSO ವರದಿಯ ಪ್ರಕಾರ ದೇಶದ ರಾಷ್ಟಟೀಯ ಉತ್ಪನ್ನಕ್ಕೆ ಕೃಷಿಯ ಕೊಡುಗೆ14%
- ಬ್ರಿಟಿಷ ಆಡಳಿತದ ಪರಿಣಾಮ, ಶೊಷನೆಯಿಂದ ತಳಹದಿಗೆ ಸಾಗಿದ್ದೆ. ಭಾರತೀಯ ಕೃಷಿ, ಸ್ವಾತಂತ್ರ್ಯಾನಂತರ ಯೋಜನಾ ಅವಧಿಗಳಲ್ಲಿ ಅದರಲ್ಲೂ **'ಹಸಿರು ಕ್ರಾಂತಿ'** ಯ ನಂತರ ಪ್ರಗತಿಯ ದರದಲ್ಲಿ ಸಾಗುತ್ತಿದೆ.
- ಕೃಷಿಯ ಯಶಸ್ಸಿಗೆ ಬಹುಮುಖ್ಯ ಕಾರಣಗಳು, ಉತ್ತಮ ನೀರಾವರಿ ಯೋಜನೆಗಳು, ಭೂ ಸುಧಾರಣಾ ಯೋಜನೆಗಳು, HYV (ಅಧಿಕ ಇಳುವರಿ ತಳಿ) ಗಳ ಪರಿಚಯ, ರಾಸಾಯನಿಕ ಗೊಬ್ಬರಗಳು.
- ಇವೆಲ್ಲದರ ನಡುವೆಯೂ ಅನೇಕ ಕಾರಣಗಳಿಂದ ಭಾರತೀಯ ಕೃಷಿ ವಲಯದ ಬೆಳವಣಿಗೆಗೆ ಅಡ್ಡಿಯಾಗಿದೆ.

**ಭಾರತೀಯ ಕೃಷಿಯಲ್ಲಿರುವ ಸಮಸ್ಯೆಗಳು ಮತ್ತು ಸವಾಲುಗಳು**

**1. ಕೃಷಿಯ ಮೇಲಿನ ಹೆಚ್ಚಿನ ಅವಲಂಬನೆ:–**

- 54% ರಷ್ಟು ಜನರು ನೇರವಾಗಿ ಕೃಷಿ ಅವಲಂಬನೆ
- ಜನಸಂಖ್ಯೆಯ ಹೆಚ್ಚಳ
- ಬದಲಿ ಉದ್ಯೋಗಗಳ ಕೊರತೆ

**2. ನೀರಾವರಿ ಸೌಲಭ್ಯದ ಕೋರತೆ:–**

- 43% ಭೂಮಿಗೆ ಮಾತ್ರ ಕೃತಕ ನೀರಾವರಿ ಸೌಲಭ್ಯ ಮತ್ತು 57% ಭೂಮಿ ನೀರಾವರಿಗೆ ಮಳೆಯನ್ನೇ ಆಶ್ರಯಿಸಿದೆ.

**3. ಛಿದ್ರಗೊಂಡ ಚಿಕ್ಕ ಹಿಡುವಳಿಗಳು ಮತ್ತು ಅವುಗಳ ಪ್ರಾಬಲ್ಯ:–**

- ಚಿಕ್ಕ ಹಿಡುವಳಿಗಳಲ್ಲಿ ಆಧುನಿಕ ಬೆಸಾಯ ಮತ್ತು ಯಾಂತ್ರಿಕ ಬೇಸಾಯ ಮಾಡಲು ಕಷ್ಟಕರ.

**4. ಕಡಿಮೆ ಉತ್ಪಾದಕತೆ:–**

- ಭೂಮಿ ಉತ್ಪಾದಕತೆ & ಶ್ರಮದ ಉತ್ಪಾದಕತೆ ಎರಡರಲ್ಲೂ ಕಡಿಮೆ ಇಳುವರಿ
- ಛಿದ್ರ ಹಿಡುವಳಿಗಳು, ಬಂಡವಾಳದ ಅಭಾವ, ಮಾರುಕಟ್ಟೆ ಸೌಲಭ್ಯದ ಕೊರತೆ ಎಲ್ಲವೂ ಕಡಿಮೆ ಉತ್ಪಾದಕತೆಗೆ ಕಾರಣ

**5. ಗ್ರಾಮೀಣ ಸಾಲಗಾರಿಕೆ:–**

- ಕಡಿಮೆ ಆದಾಯ , ಕಡಿಮೆ ಉತ್ಪಾದಕತೆ, ಉತ್ತಮ ಮಾರುಕಟ್ಟೆ ಸೌಲಭ್ಯದ ಅಭಾವ ಇವೆಲ್ಲವೂ ಗ್ರಾಮೀಣ ಸಾಲಗಾರಿಕೆಗೆ ಕಾರಣ.

**6. ಪ್ರಾಚೀನ ಕೃಷಿ ತಂತ್ರಗಳ ಬಳಕೆ:–**

- ಯಾಂತ್ರೀಕರಣ ಮತ್ತು ವೈಜ್ಞಾನಿಕ ಬೇಸಾಯವನ್ನು ಅಳವಡಿಸಿಕೊಳ್ಳಲು ಸಮಸ್ಯೆಯಾಗುತ್ತದೆ.

**7. ದಾಸ್ತಾನು ಸಂಗ್ರಹಣೆಗಳು ಮತ್ತು ಸಂಸ್ಕರಣಾ ಘಟಕಗಳ ಕೊರತೆ:–**

- ಉತ್ಪನ್ನಗಳನ್ನು ಶೇಖರಿಸಿಡಲು ಸಾದ್ಯವಾಗದಿದ್ದಾಗ, ಅಪಾರ ಪ್ರಮಾಣದ ಉತ್ಪನ್ನವು ಇಲಿ, ಹೆಗ್ಗಣ ಮುಂತಾದ ಜಂತುಗಳಿಂದ ನಾಶವಾಗಿ, ಉತ್ಪನ್ನಗಳ ಗುಣಮಟ್ಟ ಕುಸಿಯುತ್ತದೆ.

**8. ಮಾರುಕಟ್ಟೆ ಸೌಲಭ್ಯಗಳ ಕೊರತೆ:–**

❖ **1990 ರಿಂದಿಚೆಗೆ ಕಡಿಮೆ ಕೃಷಿಬೆಳವಣಿಗೆಗೆ ಕಾರಣಗಳು:–**

- ನೀರಾವರಿಯಲ್ಲಿ ಕಡಿಮೆ ಸಾರ್ವಜನಿಕ ಬಂಡವಾಳ.
- ಗ್ರಾಮೀಣ ರಸ್ತೆಗಳು, ಕಾಲುವೆಗಳಂತಹ ಮೊದಲಾದ ಗ್ರಾಮೀಣ ಮೂಲಭೂತ ಸೌಕರ್ಯಗಳ ಕಳಪೆ ನಿರ್ವಹಣೆ
- ಗ್ರಾಮೀಣ ವಿದ್ಯುದಿಕರಣದ ಮೇಲೆ ಸರ್ಕಾರಿ ಬಂಡವಾಳದ ಕುಸಿತ
- ವಿದ್ಯುತ್, ನೀರು, ರಸಾಯನ ಗೊಬ್ಬರಗಳು & ಆಹಾರದ ಮೇಲಿನ ಹೆಚ್ಚಿನ ಸಬ್ಸಿಡಿಯಿಂದ ಕೃಷಿಯ ಮೇಲೆ ಬಂಡವಾಳದ ಅಭಾವವಾಗಿ, ಮಣ್ಣಿನ ಸವಕಳಿಯಂತಹ ಪರಿಸರ ಸಮಸ್ಯೆಗಳು ಹೆಚ್ಚುತ್ತಿವೆ.
- ಅಸಮರ್ಪಕ ಸಾಲದ ವಿತರಣೆ.
- ಕೃಷಿಯ ಮಾರುಕಟ್ಟೆ, ಉತ್ಪನ್ನಗಳ ರಫ್ತು, ಸಾಲದ ವಿತರಣೆಯಲ್ಲಿನ ಕಟ್ಟುನಿಟ್ಟಾದ ನೀತಿಗಳಿಂದ ಕೃಷಿ ಲಾಭವು ಕುಸಿತವಾಗುತ್ತದೆ.
- ಕಳಪೆ ವಿಸ್ತರಣಾ ನೀತಿಗಳು.

**ಕೃಷಿ ಬೆಳವಣಿಗೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳು:–**

- ರಾಷ್ಟ್ರೀಯ ಕೃಷಿ ನೀತಿ (2007)
- ಕಿಸಾನ್ ಕ್ರೆಡಿಟ್ ಕಾರ್ಡ
- 11 ನೇ ಪಂಚವಾರ್ಷಿಕ ಯೊಜನೇಯಲ್ಲಿ ಎಲ್ಲಾ ವರ್ಗದ ಕೃಷಿಕರ ಉತ್ಪಾದನೆ ಹೆಚ್ಚಿಸಲು **' ಭಾರತ್ ನಿರ್ಮಾಣ್'** ಯೋಜನೆ
- ರಾಷ್ಟ್ರೀಯ ತೋಟಗಾರಿಕಾ ಮಿಷನ್
- ನೀರಾವರಿ ಸೌಲಭ್ಯಗಳ ವಿಸ್ತರಣೆ
- ಸಹಕಾರಿ ಬೇಸಾಯಕ್ಕೆ ಉತ್ತೇಜನ
- **'ಜಲಾನಯನ ಅಭಿವೃದ್ದಿ ನಿಧಿ'** ಯ ಸ್ಥಾಪನೆ
- 'ಬೆಂಬಲ ಬೆಲೆ ನೀತಿಯ ಅಳವಡಿಕೆ
- **'ವಿಶೇಷ ಕೃಷಿ ಉಪಜ ಯೋಜನೆ'**:– ಹಣ್ಣುಗಳು, ತರಕಾರಿಗಳು, ಹೂವುಗಳು, ಸಣ್ಣ ಆರಗ್ಯೋತ್ಪನ್ನಗಳ ರಫ್ತುದಾರರಿಗೆ ಸಬ್ಸಿಡಿ ಮತ್ತು ಸುಂಕಗಳಲ್ಲಿ ವಿನಾಯತಿ.
- ರಾಷ್ಟ್ರೀಯ ಕೃಷಿ ವಿಮಾ ನೀತಿಗಳ ಜಾರಿ ಉದಾ: ಫಸಲ್ ಭಿಮಾ ಯೋಜನೆ.

**ಕೈಗಾರಿಕೆ & ತೃತೀಯ ವಲಯಗಳು:–**

**ಸ್ವಾತಂತ್ರ್ಯ ಪೂರ್ವದಲ್ಲಿನ ಭಾರತೀಯ ಕೈಗಾರಿಕೆ:–**

ಬ್ರೀಟಿಷರ ಅವಧಿಯಲ್ಲಿ ಸ್ಥಾಪಿತವಾದ ಕೈಗಾರಿಕೆಗಳ ಬೆಳವಣಿಗೆ ಮತ್ತು ವಿಸ್ತರಣೆಯು ತೀರಾ ಮಂದಗತಿಯಲ್ಲಿತ್ತು ಚರ್ಮದ ಉತ್ಪನ್ನಗಳು, ಕಬ್ಬಿಣದ ಉತ್ಪನ್ನಗಳು, ಸುಗಂದಿತ ದ್ರವ್ಯಗಳು, ಇಟ್ಟಿಗೆ ತಯಾರಿಕೆ, ಸುಣ್ಣ ತಯಾರಿಕೆ, ಆಭರಣದ ಉತ್ಪನ್ನಗಳ ಕೈಗಾರಿಕೆಗಳು ಅಸ್ತಿತ್ವದಲ್ಲಿದ್ದವು.

**ಅಂದಿನ ಅವಧಿಯಲ್ಲಿ ಸ್ಥಾಪಿತವಾಗಿದ್ದ 3 ಕೈಗಾರಿಕೆಗಳು:–**

1. ಗ್ರಾಮೀಣ ಜನರ ದೈನಂದಿನ ಅವಶ್ಯಕತೆಗಳಿಗೆ ಬೇಕಾದ ವಸ್ತುಗಲನ್ನು ತಯಾರಿಸುವ **'ಗುಡಿ ಕೈಗಾರಿಕೆ'**

2. ನಗರ ಪ್ರದೇಶದ ಜನರ ಅವಶ್ಯಕತೆಗಳನ್ನು ಪೂರೈಸುವ ನಗರ ಗೃಹಬಳಕೆಯ ವಸ್ತುಗಳ ಕೈಗಾರಿಕೆ.

3. ಸಮಾಜದ ಉನ್ನತ ವರ್ಗದವರ ಅತ್ಯಾಧುನಿಕ ಅವಶ್ಯಕತೆಗಳು ಪೂರೈಸುವ ನಗರ ಕೈಗಾರಿಕೆಗಳು.

**ಸ್ವಾತಂತ್ರ್ಯಾ ನಂತರದ ಕೈಗಾರಿಕಾ ಸ್ಥಿತಿಗತಿಗಳು:–**

ಸ್ವಾತಂತ್ರ್ಯ ಬಂದ ಸಮಯದಲ್ಲಿ ದೇಶದಲ್ಲಿ ಕೈಗಾರಿಕೆಗಳು ಅಭಿವೃದ್ಧಿ & ವಿಸ್ತರಣೆಯು ಮಂದಗತಿಯಲ್ಲಿತ್ತು. ಬಂಡವಾಳ ಸರಕುಗಳ ಕೈಗಾರಿಕೆಗಳಿಂತ ಅನುಭೋಗಿ ವಸ್ತುಗಳ ಕೈಗಾರಿಕೆಗಳ ಪ್ರಾಬಲ್ಯವಿಲ್ಲದಿದ್ದರಿಂದ ಭಾರತವು ಬಂಡವಾಳ ಸರಕುಗಳಿಗೆ ಬೇರೆ ದೇಶಗಳನ್ನು

ಅವಲಂಬಿಸಬೇಕಾಗಿತ್ತು. ನಂತರ ಸರ್ಕಾರ ಜಾರಿಗೆ ತಂದ ಕೈಗಾರಿಕಾ ನೀತಿಗಳು, 2 ನೇ ಪಂಚವಾರ್ಷಿಕ ಯೋಜನೆ ಯಲ್ಲಿ ಕೈಗಾರಿಕೆಯನ್ನು ಮುಖ್ಯ ಧ್ಯೇಯವನ್ನಾಗಿಸಿ, ನಂತರದ ಯೋಜನೇಗಳಲ್ಲಿ ಕೈಗಾರಿಕೆಗಳಲ್ಲಿ ಕೈಗಾರಿಕೆಗೆ ಕೊಟ್ಟ ಉತ್ತೇಜನದಿಂದ, 1950–51 ರಲ್ಲಿ ಜಿ.ಡಿ.ಪಿ ಯಲ್ಲಿ 12% ಇದ್ದ ಕೈಗಾರಿಕಾ ಪಾಲು 2014–15 ರಲ್ಲಿ 26% ಕ್ಕೆ ಎರಿಕೆಯಾಗಿದೆ.

**ಸ್ವಾತಂತ್ರ್ಯಾನಂತರ ಕಂಡುಬಂದ ಕೆಲವು ಪ್ರಮುಖ ಕೈಗಾರಿಕೆಗಳ ಬೆಳವಣಿಗೆಗಳು:–**

**1. ಮೂಲಭೂತ ಸೌಕರ್ಯಗಳ ಅಭಿವೃದ್ಧಿ:–**

- ವಿದ್ಯುತ್, ಸಾರಿಗೆ ಮತ್ತು ಸಂಪರ್ಕ, ಬ್ಯಾಂಕಿಂಗ್ & ಹಣಕಾಸು, ನುರಿತ ಮಾನವ ಸಂಪನ್ಮೂಲಗಳ ಅಭಿವೃದ್ದಿ ಆಗದೇ ಆರ್ಥಿಕತೆಯ ಎಲ್ಲಾ ಘಟಕಗಳು ಅಭೀವೃದ್ಧಿಯಾಗಲು ಸಾಧ್ಯವಿಲ್ಲ ಆದ್ದರಿಂದ ಸ್ವಾತಂತ್ರ್ಯಾ ನಂತರ ಈ ಕ್ಷೇತ್ರಗಳಲ್ಲಿ ಭಾರಿ ಬದಲಾವಣೆಯಾಗಿದೆ.

**2. ಭಾರಿ ಕೈಗಾರಿಕೆಗಳ ಸ್ಥಾಪನೆ:–**

- 2 ನೇ ಪಂಚವಾರ್ಷಿಕ ಯೋಜನೆಯಲ್ಲಿ **'ನೆಹರು – ಮಹಾಲನೊಬಿಸ್'** ಮಾದರಿಯಂತೆ, ದೇಶದ ಆರ್ಥಿಕತೆಗೆ ಸಧೃಢ ತಳಪಾಯ ಹಾಕಲು ಬೃಹತ್ ಕೈಗಾರಿಕೆಗಳ ಅವಶ್ಯಕತೆಯನ್ನು ಅರಿತು, ಯಂತ್ರಗಳ ತಯಾರಿಕೆ, ಎಲೆಕ್ಟ್ರಿಕಲ್, ಕಬ್ಬಿಣ & ಸ್ಟೀಲ್, ಸಿಮೇಂಟ್ ಮೊದಲಾದ ಕೈಗಾರಿಕೆಗಳಲ್ಲಿ ಬೃಹತ್ ಪ್ರಮಾಣದ ಹೂಡಿಕೆ ಮಾಡಲಾಯಿತು.

**3. ಸಾರ್ವಜನಿಕ ವಲಯದ ವಿಸ್ತರಣೆ:–**

- 1951 ರಲ್ಲಿ ಕೇವಲ 5 ವಿಭಾಗೆತರ ಸಾರ್ವಜನಿಕ ಉದ್ಯಮಗಳಿದ್ದವು ಅವುಗಳ ಮೇಲಿನ ಹೂಡಿಕೆ 29 ಕೋಟಿ ರೂ ಆಗಿತ್ತು 2005 ಕ್ಕೆ ಅವುಗಳ ಸಂಖ್ಯೆ 239ಕ್ಕೆ ಏರಿತು. ಅವುಗಳಲ್ಲಿನ ಬಂಡವಾಳ 3,93,057 ಕೊಟಿ ರೂ ಗಳು ಹೀಗೆ ಸಾರ್ವಜನಿಕ ವಲಯದ ರಭಸವಾದ ವಿಸ್ತರಣೆ ಕೈಗಾರಿಕಾ ಬೆಳವಣಿಗೆಯ ಪ್ರಮುಖ ಲಕ್ಷಣವಾಗಿದೆ.

**4. ಖಾಸಗಿ ವಲಯದ ವೈಭವಿಕರಣ:–**

- ಖಾಸಗಿ ವಲಯಗಳಲ್ಲಿನ ಸಾಮರ್ಥ್ಯ & ಹೆಚ್ಚಿನ ಹೂಡಿಕೆಯಿಂದ ದೇಶದ ಸರ್ವಮೂಲೆಗಳಲ್ಲಿ ತ್ವರಿತಗತಿಗಯಿಂದ ಬೆಳೆಯುತಿದ್ದು, ಸಣ್ಣ & ಬೃಹತ್ ಪ್ರಮಾಣದ ಕೈಗಾರಿಕೆಗಳು ಗಮನಾರ್ಹ ಪ್ರಗತಿ ಸಾಧಿಸಿವೆ. ಈ ಮೇಲೆ ಸಡಿಲಗೋಂಡ ನೀತಿಯಿಂದ ಕೈಗಾರಿಕೆಗಳಲ್ಲಿ ವಿದೇಶಿ ಹೂಡಿಕೆ ಹೆಚ್ಚಿನ ಪ್ರಮಾಣದಲ್ಲಿ ಹರಿದು ಬರುತ್ತಿದೆ.

**5. ಸಂಶೋಧನೆ & ಆಬಿವೃದ್ಧಿ**

- ಸ್ವಾತಂತ್ರ್ಯಾನಂತರ ಸಂಶೋಧನೆ & ಆಭೀವೃದ್ದಿಯಲ್ಲಿ ಹೆಚ್ಚಿನ ಹೂಡಿಕೆ& ವೈಜ್ಞಾನಿಕ & ಕೈಗಾರಿಕಾ ಸಂಶೋಧನಾ ಮಂಡಳಿ (CSIR), 'ISRO' ಮುಂತಾದ ಅಂಗ ಸಂಸ್ಥೆಗಳ ಸಹಾಯದಿಂದ ದೇಶವು ಇಂದು ಸಂಶೋಧನೆ & ಅಭಿವೃದ್ಧಿಯಲ್ಲಿ ಅತ್ಯುನ್ನತ ಪ್ರಗತಿ ಸಾಧಿಸಿದೆ.
- ಸಾರ್ವಜನಿಕ & ಖಾಸಗಿ ವಲಯಗಳಲ್ಲಿ R&D ಸೌಲಭ್ಯ ನೀಡಲಾಗಿದೆ.
- ವಿದೇಶಿ ಸಂಸ್ಥೇಗಳ ಸಹಯೋಗದಿಂದ ತಾಂತ್ರಿಕ ಅಭಿವೃದ್ಧಿಗೆ ಸಹಾಯಕವಾಗಿದೆ.

❖ ಭಾರತದಲ್ಲಿ ತೃತೀಯ ವಲಯದ ಸ್ಥಿತಿಗತಿ

- ಪ್ರಸ್ತುತ ಭಾರತದ GDP ಯಲ್ಲಿ 60% ರಷ್ಟು ಕೊಡುಗೆ ತೃತೀಯ ವಲಯದ್ದೆ ಆಗಿದೆ
- ಉದ್ಯೋಗಗಳ ಸೃಷ್ಟೀ & ರಾಷ್ಟ್ರೀಯ ಆದಾಯದ ಕೊಡುಗೆಯಲ್ಲಿ ತೃತೀಯ ವಲಯದ್ದೆ ಮೇಲುಗೈ ಆಗಿದೆ.
- ಮುಂದಿನ ವರ್ಷಗಳಲ್ಲಿ ಭಾರತದ ಶೇ.70% ರಷ್ಟು ಉದ್ಯೋಗಗಳನ್ನು ತೃತೀಯ ವಲಯ ಪೂರೈಸುತ್ತದೆ.
- ವಾರ್ಷಿಕ 10% ಬೆಳವಣಿಗೆ ಕಾಣುತ್ತಿರುವ ಈ ವಲಯವು ಭಾರತವು ರಫ್ತಿನ 1/3 ರಷ್ಟು ಒಳಗೊಂಡಿದೆ.

❖ **ಬೆಳವಣಿಗೆ & ಹಂಚಿಕೆ ನ್ಯಾಯ**

ಹಂಚಿಕೆ ನ್ಯಾಯ ಎಂದರೆ ದೇಶದ ಎಲ್ಲಾ ನಾಗರಿಕರಿಗೆ ಜೀವನೋಪಾಯದ ಸಾಧನಗಳಲ್ಲಿ, ಅವಕಾಶಗಳಲ್ಲಿ & ಉದ್ಯೋಗಗಳಲ್ಲಿ ನ್ಯಾಯವನ್ನು ಒರಗಿಸುವುದು ಎಂದರ್ಥ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬದುಕುತ್ತಿರುವ ಪ್ರತಿಯೊಬ್ಬನೂ, ಸಮಾಜದ ಚೌಕಟ್ಟಿನ ಒಳಗೆ ಮೂಲಭೂತ ಹಕ್ಕುಗಳು & ಕರ್ತವ್ಯಗಳನ್ನು ಗೌರವಿಸಿದೆ, ಪಾಲಿಸಿ ಜೀವಿಸಬೆಕು. ಸಂವಿಧಾನದ **'ರಾಜ್ಯನೀತಿ ನಿರ್ದೇಶಕ'** ತತ್ವ ದಲ್ಲಿ ಸಾಮಾಜಿಕ ನ್ಯಾಯ & ಹಂಚಿಕೆ ನ್ಯಾಯ ಪರಿಕಲ್ಪನೇಗಳಿಗೆ ಮಹತ್ವ ನೀಡಲಾಗಿದೆ.

**ಇದರ ಮುಖ್ಯ ಅಂಶಗಳು:–**

1. ಸಂಪತ್ತು ಕೆವಲ ಕೆಲವೇ ವ್ಯಕ್ತಿಗಳಲ್ಲಿ ಕೇಂದ್ರೀಕೃತವಾಗದಂತೆ ತಡೆಗಟ್ಟಬೇಕು
2. ಉತ್ಪನ್ನ, ಉದ್ಯೋಗ & ಆದಾಯ ಎಲ್ಲರ ನಡುವೆ ಸಮನಾಗಿ ವಿತರಣೆಯಾಗಬೇಕು.
3. ದೇಶದ ಸಮಸ್ತ ನಾಗರಿಕರೂ ಜೀವನೋಪಾಯಕ್ಕೆ ಸಾಕಷ್ಟು ಸೌಲಭ್ಯಗಳನ್ನು ದೊರಕಿಸಿಕೊಡುವುದು.

❖ **ಬಡತನ & ಅಸಮಾನತೆ :–**

- ಭಾರತದಲ್ಲಿನ ಕಡಿಮೆ ಉತ್ಪಾದನೆಯು ಬಡತನಕ್ಕೆ ಕಾರಣವಾದರೆ ಬಡತನವು ಕಡಿಮೆ ಉತ್ಪಾದನಕ್ಕೆ ಕಾರಣವಾಗಿದ್ದು, ಇದು ಒಂದು ವಿಷವೃತ್ತದಂತೆ

ಜಟಿಲವಾಗಿದೆ. ಆದ್ದರಿಂದಲೇ **'ಗುನ್ನಾರ ಮಿರ್ಡಾಲ್' 'ಒಂದು ದೇಶ ಬಡವಾಗಿದೆ, ಏಕೆಂದರೆ ಅದು ಬಡ ದೇಶ'** ಎಂದಿದ್ದಾನೆ.

- 1991 ರಲ್ಲಿ ಭಾರತ ಅಳವಡಿಸಿಕೊಂಡ ಬೃಹತ್ ಆರ್ಥಿಕ ಸುಧಾರಣೆಗಳಿಂದ GDP ಬೆಳವಣಿಗೆಯಲ್ಲಿ ಏರಿಕೆ ಕಂಡು ಬರುತ್ತದೆ. ಆದರೆ GDP ಯು ಆರ್ಥಿಕ ಬೆಳವಣಿಗೆಯನ್ನು ಮಾತ್ರ ಸೂಚಿಸುತ್ತದೆಯೆ ಹೊರತು, GDP ಬೆಳವಣಿಗೆಯಿಂದ ಜನಸಾಮಾನ್ಯರ ಅದರಲ್ಲೂ ಬಡವರ ಬದುಕಿನಲ್ಲಿ ಆಗಬೇಕಾದ ಬದಲಾವಣೆಗಳನ್ನು ಗುರುತಿಸುವ ಸೂಚಕವಾಗಿಲ್ಲ.
- ಸುರೇಶ್ ತೆಂಡೂಲ್ಕರ್ ಸಮೀತಿಯು ಬಡತನದ ಪ್ರಮಾಣದಲ್ಲಿ ಇಳಿಕೆಯಾಗಿರುವುದನ್ನು ಉಲ್ಲೇಖಿಸಿದೆ.
- ಹೆಚ್ಚಿನ ಆರ್ಥಿಕ ಬೆಳವಣಿಗೆ, ಹೆಚ್ಚಿನ ನೀರಾವರಿ ಸೌಲಭ್ಯ ಕೃಷಿ ಬೆಳವಣಿಗೆ, ಗುಡಿ ಕೈಗಾರಿಕೆಗಳು, ದಿನಗೂಲಿಯಲ್ಲಿನ ಹೆಚ್ಚಳ, MANREGA ದಂತಹ ಬಡತನ ನಿರ್ಮೂಲನಾ ಯೋಜನೆಗಳಿಂದ ಬಡತನವು 1990 ದಶಕಕ್ಕೆ ಹೊಲಿಸಿದರೆ ಸುಧಾರಿತ ಪ್ರಮಾಣದಲ್ಲಿ ಕಡಿಮೆಯಾಗಿದೆ.

**ಅಸಮಾನತೆ:–**

- ಗಿನಿ ಸೂಚ್ಯಂಕವನ್ನು **'ಆದಾಯ ಅಸಮಾನತೆ'** ಯನ್ನು ಸೂಚಿಸಲು ಬಳಸಲಾಗುತ್ತದೆ.
- ಅನುಭೋಗಿ ವೆಚ್ಚದಲ್ಲಿ ಭಾರತದ ಗ್ರಾಮೀಣ ಪ್ರದೇಶದಲ್ಲಿ ಗಿನಿ ಸೂಚ್ಯಂಕವು 1993–94 ರಲ್ಲಿ 0.29 ಇಂದ 2011–12 ಕ್ಕೆ 0.31 ಕ್ಕೆ ಏರಿಕೆಯಾಗಿದೆ. ಆದರೆ ಅನುಭೋಗಿ ವೆಚ್ಚದ ಆಧಾರದ ಮೇಲೆ ಗಿನಿ ಸೂಚ್ಯಂಕವು ಆದಾಯ ಅಸಮಾನತೆಯನ್ನು ಸಮರ್ಪಕವಾಗಿ ವಿವರಿಸುವುದಿಲ್ಲ.
- 'ಅನ್ವಯಿಕ ಆರ್ಥಿಕ ಸಂಶೋಧನಾ ರಾಷ್ಟ್ರೀಯ ಮಂಡಳಿ'ಯು **'ಭಾರತೀಯ ಮಾನವಾಭಿವೃದ್ಧಿ ಸಮೀಕ್ಷೆ'**ಯ ಆಧಾರದ ಮೇಲೆ **'ಆದಾಯ'** ವನ್ನು ಗಣನೆಗೆ ತೆಗೆದುಕೊಂಡಾಗ ಅಸಮಾನತೆಯ ಭಾರತದಲ್ಲಿ ಅನುಭೋಗಿ ವೆಚ್ಚಕ್ಕಿಂತ ಅಧಿಕವಾಗಿದೆ. ಆದಾಯವಿಲ್ಲದ ಆರೋಗ್ಯ & ಶಿಕ್ಷಣವನ್ನು ಸೂಚ್ಯಂಕವಾಗಿ ಬಳಸಿದಾಗ ಬಡವರ & ಶ್ರೀಮಂತರ ನಡುವೆ ಅಸಮಾನತೆಯು ವಿಪರೀತವಾಗಿದೆ.

**ಆದಾಯ ಅಸಮಾನತೆ& ಬಡತನ ನಿವಾರಣೆಗೆ ಪರಿಹಾರಗಳು:–**

- ಬಡತನವು ವೇಗವಾಗಿ ಕಡಿಮೆಯಾಗುತ್ತಿದ್ದರೂ ಕೂಡ ಅಸಮಾನತೆ ಹೆಚ್ಚುತ್ತಾ ಹೋಗುತ್ತದೆ ಇಂದಿಗೂ 300 ಮಿಲಿಯನ್ ಮಂದಿ ಬಡತನ ರೇಖೆಗಿಂತ ಕೆಳಗೆ ಜೀವಿಸುತಿದ್ದಾರೆ.

- ಸರ್ಕಾರವು ಹೆಚ್ಚಿನ ಆರ್ಥಿಕ ಬೆಳವಣಿಗೆಯನ್ನು ಸಾಧಿಸುವುದರ ಜೊತೆಗೆ ಸಾಮಾಜಿಕ ರಕ್ಷಣಾ ಕಾರ್ಯಕ್ರಮಗಳನ್ನು ಜಾರಿ ತರುವ ಕಾರ್ಯತಂತ್ರ ರೂಪಿಸಬೇಕು.
- ನಗರ ಜನರ ಬೆಳವಣಿಗೆ & ಆದಾಯ ಹೆಚ್ಚಿಸುವುದಕ್ಕೂ ಗಮನ ನೀಡಿರುವುದರಿಂದ ನಗರಿಕರಣದಿಂದ ಬೆಳೆಯುತ್ತಿರುವ ನಗರದ ಬಡತನವನ್ನು ನಿವಾರಿಸಬಹುದು.
- ನ್ಯಾಯಸಮ್ಮತ & ಸಮತೋಲಿತ ಬೆಳವಣಿಗೆಯು ಉದ್ಯೋಗ ಸೃಷ್ಠಿಯ ಜೊತೆಗೆ ಸಾಮಾಜಿಕ ರಕ್ಷಣಾ ಕಾರ್ಯವನ್ನು ಮಾಡುವುದರಿಂದ ಹೆಚ್ಚು ಸೂಕ್ತ ಕಾರ್ಯತಂತ್ರವಾಗಿದೆ.
- ಅಧ್ಯಯನಗಳ ಪ್ರಕಾರ ಕೃಷಿ ಬೇಳವಣಿಗೆಯು, ಇತರೆ ವಲಯಗಳ ಬೆಳವಣಿಗೆಗಳಿಗಿಂತ 2 ಪಟ್ಟು ಬಡತನ ನಿವಾರಣೆ ಮಾಡುತ್ತದೆ. ಆದ್ದರಿಂದ ವೈವಿದ್ಯಕರಣ ಕೃಷಿ ಮತ್ತು ಉತ್ತಮ ನೀರಾವರಿ ವಿಸ್ತರಣಾ ಕಾರ್ಯಕ್ರಮಗಳಿಂದ ರೈತರ ಆದಾಯ ಹೆಚ್ಚಿಸುವ ಕಾರ್ಯ ಮಾಡಬೇಕು.
- ಭವಿಷ್ಯದಲ್ಲಿ ಕೈಗಾರಿಕಾ & ತೃತೀಯ ವಲಯಗಳು ಉದ್ಯೋಗ ಸೃಷ್ಠೀಯ ಮೂಲವಾಗಿರುವುದರಿಂದ, **'ಮೇಕ್ ಇನ್ ಇಂಡಿಯಾ' 'ಸ್ಟಾರ್ಟ್ ಅಪ್ ಇಂಡಿಯಾ' 'ಮುದ್ರಾ'** ಮೊದಲಾದ ಯೋಜನಗಳು ಉದ್ಯೋಗ ಸೃಷ್ಠಿಯ ಜೊತೆಗೆ ಬಡತನ ನಿವಾರಣೆ ಸಹಕಾರಿಯಾಗುತ್ತದೆ.
- ಸಂಘಟಿತ & ಅಸಂಘಟಿತ ವಲಯಗಳಲ್ಲಿ ಉತ್ಪಾದನೆ & ಆದಾಯ ಹೆಚ್ಚಿಸುವುದರ ಜೊತೆಗೆ, ಕೌಶಲಾಭಿವೃದ್ಧಿ ಯೋಜನೆಗಳನ್ನು ಹಮ್ಮಿಕೋಳ್ಳಬೇಕು.
- ಕನಿಷ್ಠ ವೇತನ ನಿಗದಿ ಮಾಡಬೇಕು.
- **'ಭೂ ಸುಧಾರಣೆ'** ಯಂತಹ ಯೋಜನೆಗಳ ಮೂಲಕ ಹೆಚ್ಚುವರಿ ಸಂಪತ್ತಿನ ವಿತರಣೆ ಮಾಡಬೇಕು
- ಆದಾಯದ ಹೆಚ್ಚಳಕ್ಕೆ ಅನುಗುಣವಾಗಿ ತೆರಿಗೆಯ ದರವನ್ನು ಹೆಚ್ಚಿಸುವುದರಿಂದ ಶ್ರೀಮಂತರ ಮೇಲೆ ಕಡಿಮೆ ತೆರಿಗೆಯ ಹೊರೆ ಬೀಳುತ್ತದೆ.
- **'ಉತ್ತಮ ಸಾರ್ವಜನಿಕ ಆಡಳಿತ'** ದಿಂದ ಸರ್ಕಾರಿ ಸೌಲಭ್ಯಗಳನ್ನು ಫಲಾನುಭವಿಗಳಿಗೆ ತಲುಪಿಸುವ ಕಾರ್ಯ ಮಾಡಬೇಕು.

❖ **ಯೋಜನಾ ಅವಧಿಯಲ್ಲಿ ಕರ್ನಾಟಕ ಅರ್ಥವ್ಯವಸ್ಥೆಯ ಬೆಳವಣಿಗೆ ಯುಗ:–**

ಸರ್. ಎಂ. ವಿಶ್ವೇಶ್ವರಯ್ಯನವರ **'ಭಾರತ ಯೋಜಿತ ಆರ್ಥಿಕತೆ'** (Planned Economy for India) ಪುಸ್ತಕದಂತೆ, ಮೈಸೂರು ಸಂಸ್ಥಾನದಲ್ಲಿ ಆರಂಭವಾದ ಆರ್ಥಿಕ ಸಮ್ಮೇಳನವು ಮೈಸೂರು ರಾಜ್ಯದಲದಲ್ಲಿ ಕೈಗಾರಿಕಾ ಅಭಿವೃದ್ಧಿ & ರಾಜ್ಯದ ಆದಾಯವನ್ನು ಹೆಚ್ಚಿಸಲು ಹಲವಾರು ಯೋಜನೆಗಳನ್ನು ಶಿಫಾರಸ್ಸು ಮಾಡಿತು. **'ಕೈಗಾರಿಕರಣ ಇಲ್ಲವೇ ನಾಶ'** ಅವರ ಘೋಷಣೇಯಾಗಿತ್ತು. ಹೀಗೆ ಮೈಸೂರು ಸಂಸ್ಥಾನ ಭಾರತ ದೇಶದಲ್ಲಿಯೆ **'ಆರ್ಥಿಕ ಯೋಜನೇಯನ್ನು'** ರೂಪಿಸಿದ ಮೊದಲ ರಾಜ್ಯವಾಗಿದೆ.

**1 ನೇ ಪಂಚವಾರ್ಷಿಕ ಯೋಜನೇ:–**

- ಒಟ್ಟು ವೆಚ್ಚ– 40.51 ಕೋಟಿ
- ಪ್ರಮುಖ ವಲಯಗಳು – ನೀರಾವರಿ (15 ಕೋಟಿ), ವಿದ್ಯುತ್ (10 ಕೋಟಿ), ಕೈಗಾರಿಕೆ (4.8 ಕೋಟಿ), ಕೃಷಿ (3.60 ಕೊಟಿ)
- **'ಹೆಚ್ಚು ಆಹಾರ ಬೇಳೆಯಿರಿ (GROW MORE FOOD)** ಚಳುವಳಿ ಜನಪ್ರೀಯವಾಯಿತು.
- ರಾಷ್ಟ್ರೀಯ ವಿಸ್ತರಣ ಸೇವೆಯು ಅನುಷ್ಠಾನ
- 4,100 ಎಕೆರೆಯಲ್ಲಿ ಅರಣ್ಯೀಕರಣ

**2ನೇ ಪಂಚವಾರ್ಷಿಕ ಯೋಜನೇ:–**

- ಒಟ್ಟು ವೆಚ್ಚ –142.82 ಕೋಟಿ
- ಪ್ರಮುಖ ವಲಯ – ನೀರಾವರಿ, ವಿದ್ಯುತ್, ಸಾಮಾಜಿಕ ಸೇವೆ.
- 3 ಲಕ್ಷ ಎಕರೆ ಪ್ರದೇಶಕ್ಕೆ ಸಣ್ಣ ನೀರಾವರಿ ವಿಸ್ತರಣೆ
- ವ್ಯವಸಾಯದ ಉತ್ಪನ್ನದಲ್ಲಿ ಹೆಚ್ಚಳ & ವಿದ್ಯುಚ್ಛಕ್ತಿಯಲ್ಲಿ 269 ದಶಲಕ್ಷ ಕಿಲೋವ್ಯಾಟ್ ಹೆಚ್ಚಳ

**3 ನೇ ಪಂಚವಾರ್ಷಿಕ ಯೋಜನೇ:–**

- ರಾಜ್ಯದ ಆರ್ಥಿಕಾಭಿವೃದ್ಧಿಯಲ್ಲಿ ಇದು ಮೊದಲ ಸಮಗ್ರ & ವಿಸ್ತಾರವಾದ ಯೋಜನೆ
- ಒಟ್ಟು ವೆಚ್ಚ – 264.75 ಕೋಟಿ
- ಪ್ರಮುಖ ವಲಯಗಳು– ನೀರಾವರಿ+ ವಿದ್ಯುಚ್ಛಕ್ತಿ=41%
  ಕೃಷಿ & ಸಂಬದಿತ ವಲಯ 18%
- ಹಾರಂಗಿ, ಕೃಷ್ಣಾ ಮೇಲ್ದಂಡೆ, ಹೇಮಾವತಿ, ಮಲಪ್ರಭಾದಂತಹ ಪ್ರಮುಖ ನೀರಾವರಿ ಯೋಜನೆಗಳ ಆರಂಭ

**4 ನೇ ಪಂಚವಾರ್ಷಿಕ ಯೋಜನೆ:–**

- **'ಪ್ರಾದೇಶಿಕ ಆಭಿವೃದ್ದಿ'** & **'ಜಿಲ್ಲಾ ಯೋಜನೆಗಳಿಗೆ'** ಹೆಚ್ಚಿನ ಗಮನ
- ಒಟ್ಟು ವೆಚ್ಚ – 386.82 ಕೊಟಿ
- ಪ್ರಮುಖ ಗುರಿ– ಕೃಷಿ ವಲಯದಲ್ಲಿ 5.6 ದರದ ಪ್ರಗತಿ
- ನೀರಾವರಿ ಪ್ರದೇಶದಲ್ಲಿ 2.80 ಲಕ್ಷ ಟನ್‌ಗಳಿಂದ 66 ಲಕ್ಷ ಟನ್‌ಗಳಿಗೆ ಏರಿಕೆ.
- **'ವಿದ್ಯಚ್ಛಕ್ತಿಯ ತಲಾ ಅನುಭೋಗ'** 82 ಘಟಕ (Unit) ನಿಂದ 121 ಘಟಕಕ್ಕೆ ಏರಿಕೆ

**5 ನೇ ಪಂಚವಾರ್ಷಿಕ ಯೋಜನೆ:–**

- ಒಟ್ಟು ವೆಚ್ಚ –852 ಕೋಟಿ
- ಪ್ರಮುಖ ಗುರಿ– ಬಡತನ ನಿರ್ಮೂಲನೆ & ಸ್ವಾವಲಂಬನೆಯ ಸಾಧನೆ.
- ಮುಖ್ಯ ಧ್ಯೆಯಗಳು–
    1. ವಾರ್ಷಿಕ 8.5 % ದರದಲ್ಲಿ ಪ್ರಗತಿ
    2. ತಲಾ ಆದಾಯವನ್ನು ರಾಷ್ಟ್ರೀಯ ತಲಾ ಆದಾಯವನ್ನು ಹೆಚ್ಚಿಸುವುದು.
    3. ವಿದ್ಯುಚ್ಛಕ್ತಿ & ಸಂಪರ್ಕ
    4. ಗ್ರಾಮೀಣ & ಪಟ್ಟಣಗಳಲ್ಲಿ ಉತ್ಪಾದಕ ಉದ್ಯೋಗಗಳ ಹೆಚ್ಚಳ.
    5. ವಿಕೇಂದ್ರೀಕೃತ & ವಿಸ್ತರಿಸಿದ ಕೈಗಾರಿಕಾ ಆಭಿವೃದ್ಧಿ

**6 ನೇ ಪಂಚವಾರ್ಷಿಕ ಯೋಜನೆ**

- ಒಟ್ಟು ವೆಚ್ಚ– 2400 ಕೋಟಿ
- ಪ್ರಮುಖ ಧ್ಯೇಯಗಳು:–
    1. ಸಂಪನ್ಮೂಲಗಳ ಗರಿಷ್ಠ ಬಳಕೆ
    2. 1988 ರ ವೇಳೆಗೆ ಪೂರ್ಣೋದ್ಯೋಗ ಸಾಧಿಸುವುದು.
    3. ವಾರ್ಷಿಕ 6.5 ದರದ ಪ್ರಗತಿ
    4. ತಲಾ ಆದಾಯ 1115 ರೂ ನಿಂದ 1500 ರೂ ಗೆ ಹೆಚ್ಚಿಸುವುದು.
- 17626 ಗ್ರಾಮಗಳಿಗೆ ವಿದ್ಯಚ್ಛಕ್ತಿ ಸೌಲಭ್ಯ ಒದಗಿಸಲಾಯಿತು.

**7 ನೇ ಪಂಚವಾರ್ಷಿಕ ಯೋಜನೆ.:–**

- ಒಟ್ಟು ವೆಚ್ಚ– 4056 ಕೋಟಿ
- ಕೈಗಾರಿಕೆಯಲ್ಲಿ 6.6% & ಕೃಷಿಯಲ್ಲಿ 2.1% ಪ್ರಗತಿ
- ನೀರಾವರಿ ಸಾಮರ್ಥ್ಯ & ವಿದ್ಯತ್‌ನ ಕೊರತೆ ಹಾಗೂ ಬರಗಾಲದಿಂದ ಈ ಯೋಜನೆಯಲ್ಲಿ ಕಳಪೆ ಪ್ರಗತಿಯಾಯಿತು.

**8 ನೇ ಪಂಚವಾರ್ಷಿಕ ಯೋಜನೆ:–**

- ಒಟ್ಟು ವೆಚ್ಚ – 14894 ಕೋಟಿ.
- ಪ್ರಮುಖ ಧ್ಯೇಯಗಳು :–
    1. ವಾರ್ಷಿಕ 5.6 ಪ್ರಗತಿ
    2. ಬಡತನ ರೇಖೆಯಿಂದ ಕೆಳಗಿರುವ 38% ಜನರನ್ನು 25% ಕ್ಕೆ ಇಳಿಸುವುದು.
    3. 20 ಲಕ್ಷ ಉದ್ಯೋಗಾವಕಾಶಗಳ ಸೃಷ್ಟಿ

4. ಮೂಲಸೌಲಭ್ಯಗಳ ಅಭಿವೃದ್ಧಿ

**9 ನೇ ಪಂಚ ವಾರ್ಷಿಕ ಯೋಜನೆ:–**

- ಒಟ್ಟು ವೆಚ್ಚ– 23,400 ಕೊಟಿ
- ಪ್ರಮುಖ ಗುರಿ– ಶಿಕ್ಷಣ, ಆರೋಗ್ಯ, ಕುಡಿಯುವ ನೀರು, ನೈರ್ಮಲ್ಯ & ವಸತಿ.
- ದ್ವಿತಿಯ & ತೃತಿಯ ವಲಯಗಳಲ್ಲಿ ಹೆಚ್ಚಿನ ಉದ್ಯೋಗ ಸೃಷ್ಟಿಸುವುದರ ಮೂಲಕ ಪ್ರಾಥಮಿಕ ವಲಯದಲ್ಲಿ ಉಂಟಾಗುವ ನಿರುದ್ಯೋಗಗಳನ್ನು ನಿವಾರಿಸುವುದು ಇದರ ಪ್ರಮುಖ ಗುರಿಗಳಲ್ಲಿ ಒಂದಾಗಿತ್ತು.
- **'ಮಾನವ ಅಭಿವೃದ್ಧಿಯ'** ಜೊತೆಗೆ ಬಟತನ ನಿರ್ಮೂಲನೆ ಮಾಡಿ ಜನರ ಜೀವನ ಮಟ್ಟ ಸುಧಾರಿಸುವುದು.

**10 ನೇ ಪಂಚವಾರ್ಷಿಕ ಯೋಜನೆ**

- ಒಟ್ಟು ವೆಚ್ಚ– 43558 ಕೋಟಿ
- ಪ್ರಮುಖ ಧ್ಯೇಯಗಳು:–
    1. ರಾಷ್ಟ್ರದ ಪ್ರಗತಿ ದರಕ್ಕಿಂತ ಹೆಚ್ಚಿನ ಪ್ರಗತಿ ಸಾಧಿಸುವುದು.
    2. ನಿರುದ್ಯೋಗ & ಬಡತನ ನಿವಾರಣೆ
    3. ಪ್ರಾದೇಶಿಕ ಅಸಮತೋಲನ ನಿವಾರಣೆ
    4. ನೀರಾವರಿ & ವಿದ್ಯುಚ್ಛಕ್ತಿಯಲ್ಲಿ ಹೆಚ್ಚಿನ ಪ್ರಗತಿ ಸಾಧಿಸುವುದು

**ರಾಜ್ಯದ ಅರ್ಥವ್ಯವಸ್ಥೆಯಲ್ಲಿ ಕೃಷಿ & ಕ್ಷೇತ್ರೀಯ ಬದಲಾವಣೆಗಳು, ಪರಸ್ಪರ ಸಂಪರ್ಕ**

- ರಾಜ್ಯದ ಆರ್ಥಿಕತೆಯು ಸೇನಾ ವಲಯದ ಅಭಿವೃದ್ಧಿಯಿಂದ ಉತ್ತಮ ಗತಿಯಲ್ಲಿ ಸಾಗಿದೆ.
- ಬರಗಾಲ ಬೆಳೆನಾಶದಿಂದ ಕೃಷಿ & ಸಂಭಂದಿತ ವಲಯದ ಬೆಳವಣಿಗೆಯು ಕುಂಠಿತವಾಗಿದೆ (–2.9%)
- ಕೈಗಾರಿಕಾ ವಲಯದ ಬೆಳವಣಿಗೆಯಲ್ಲಿ ಕುಸಿತವಾಗಿದೆ. ಆದರೆ ಹೊಸ ಕೈಗಾರಿಕಾ ನೀತಿ (2014–19), ಜವಳಿ ನೀತಿ(2013–18) ಯಂತಹ ಮೊದಲಾದ ಹೊಸ ನೀತಿಗಳಿಂದ ಕೈಗಾರಿಕೆಯು ಕ್ರಮೇಣ ಬೆಳವಣಿಗೆಯ ಹಾದಿಯಲ್ಲಿ ಸಾಗುತ್ತಿದೆ.

**ರಾಜ್ಯಾದಯದ ಕ್ಷೇತ್ರೀಯ ಪಾಲು:–**

ಕೃಷಿ –11.68

ಕೈಗಾರಿಕೆ–23.68

ಸೇವಾ ವಲಯ– 64.64

- **'ಸ್ಥಿರಾಸ್ತಿ'** ವೃತ್ತಿಪರ ಸೇವೆಗಳು & ವಾಸಗೃಹಗಳ ಒಡೆತನದ ಕೊಡುಗೆಯು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ ಅತಿ ಹೆಚ್ಚು ಅಂದರೆ 32.55% ನಂತರ ತಯಾರಿಕಾ ವಲಯ (14.76) ವ್ಯಾಪಾರ & ದುರಸ್ತಿ ಸೇವೆಗಳು (9.04%), ಬೆಳೆಗಳು (8.19)
- ಪ್ರಾಥಮಿಕ ವಲಯದಲ್ಲಿ ಬೆಳಗಾವಿ ಜಿಲ್ಲೆಯ ಕೊಡುಗೆ ಪ್ರಥಮ.
- ದ್ವಿತಿಯ & ತೃತಿಯ ವಲಯದಲ್ಲಿ ಬೆಂಗಳೂರು ನಗರ ಜಿಲ್ಲೆ ಪ್ರಥಮ ಸ್ಥಾನ

**ಘಟಕ 2**

## ಭಾರತ ಅಂತರಾಷ್ಟ್ರೀಯ ಆರ್ಥಿಕ ಸಂಬಂಧಗಳು

### ಭಾರತದ ವಿದೇಶಿ ವ್ಯಾಪಾರ ನೀತಿ:–


ಯಾವುದೇ ದೇಶವು ನೈಸರ್ಗಿಕವಾಗಿ & ಆರ್ಥಿಕವಾಗಿ ಸ್ವಾವಲಂಬಿಯಾಗಲು ಸಾದ್ಯವಿಲ್ಲ. ವಿದೇಶಗಳ ಜೊತೆ ವ್ಯಾಪಾರ ವಿನಿಮಯಯು ಸ್ವಾಭಾವಿಕ & ಅವಶ್ಯಕ ಒಂದು ದೇಶದ ರಫ್ತು & ಆಮದುಗಳ ಮೇಲಿನ ನೀತಿ & ದೇಶದ ದಿರ್ಘಾವಧಿ ಗುರಿ ಸಾಧಿಸಲು ರೂಪಿಸುವ ನಿಯಮಗಳನ್ನು **'ವಿದೇಶಿ ವ್ಯಾಪಾರ ನೀತಿ'** ಎಂದು ಕರೆಯುತ್ತಾರೆ.

| **ಸ್ವಾತಂತ್ರ್ಯ ಪೂರ್ವದ ವಿದೇಶಿ ವ್ಯಾಪಾರ** | **ಸ್ವಾತಂತ್ರ್ಯಾ ನಂತರ ವಿದೇಶಿ ವ್ಯಾಪಾರ ನೀತಿ.** |
|---|---|
| 1. ಸಿಂಧೂ ನಾಗರಿಕತೆಯಿಂದ ಹಿಡಿದು 17 & 18 ನೇ ಶತಮಾನದಲ್ಲಿ ವಿದೇಶಿ ವ್ಯಾಪಾರವು ಅತ್ಯನ್ನತ ಸ್ಥಿತಿಯಲ್ಲಿತ್ತು. ಪ್ರಮುಖ ರಫ್ತು ವಸ್ತುಗಳು:– ಮಸಾಲ ಪದಾರ್ಥಗಳು, ಹತ್ತಿ, ಉಣ್ಣೆ, ಸಕ್ಕರೆ.<br>2. ಇಂಗ್ಲೆಂಡನ **'ಕೈಗಾರಿಕ ಕ್ರಾಂತಿ'** ಯ ಸಮಯದಲ್ಲಿ ಭಾರತವು ಕೇವಲ ಇಂಗ್ಲೆಂಡಗೆ ಕಚ್ಚಾವಸ್ತುಗಳ ಪೂರೈಕೆದಾರನಾಗಿ, ಅಲ್ಲಿ ತಯಾರಾದ ವಸ್ತುಗಳಿಗೆ ಭಾರತವು ಲಾಭದಾಯಕ ಮಾರುಕಟ್ಟೆಯಾಗಿ ಪರಿಣಮಿಸಿ, ಇಲ್ಲಿನ ಕರಕುಶಲ ಕೈಗಾರಿಕೆಗಳ ಅವನತಿಯಾಗಿ ವಿದೇಶಿ ವ್ಯಾಪಾರವು ಕುಸಿಯಿತು.<br>3. 1 ನೇ & 2 ನೇ ಮಹಾಯದ್ದದಲ್ಲಿ ಜಾಗತಿಕ ಆರ್ಥಿಕ ಮುಗ್ಗಟ್ಟಿನಿಂದ ಭಾರತದ ವಿದೇಶ ವ್ಯಾಪಾರದ ಗಾತ್ರ ಕುಸಿಯಿತು. | 1. 1 ನೇ & 2 ನೇ ಪಂಚವಾರ್ಷಿಕ ಯೋಜನೆಗಳಲ್ಲಿ ಕೈಗಾರಿಕಾ ಪ್ರಗತಿಯಿಂದ ರಫ್ತುಗಳ ಹೆಚ್ಚಳವಾಯಿತು.<br>2. 3 ನೇ ಪಂಚವಾರ್ಷಿಕ ಯೋಜನೆಯಲ್ಲಿ ಪಾಕಿಸ್ತಾನ ಮತ್ತು ಚೀನಾ ದೇಶಗಳ ಜೊತೆ ಆದ ಯುದ್ಧಗಳ ಪರಿಣಾಮ ಕಡಿಮೆ ಉತ್ಪಾದನೆ.<br>3. 1990 ರ ಅವಧಿಯಲ್ಲಿ ಪಾವತಿ ಶಿಲ್ಕಿನ ನಿವ್ವಳ ಲಾಭದ ಕೊರತೆಯ 36000 ಕೊಟಿಗಳನ್ನುಮೀರಿದ್ದರಿಂದ **'ವಿದೇಶಿ ವಿನಿಮಯ ನಿಧಿ'** ಕೇವಲ 1 ಬಿಲಿಯನ್ ಡಾಲರ್ ಗೆ ಇಳಿಕೆ.<br>4. 1991 ಅವಧಿಯಲ್ಲಿ LPG ನೀತಿ<br>5. ಲೈಸೆನ್ಸ ರಾಜ್ ನ ನಿರ್ಮೂಲನೆ.<br>6. ವಿದೇಶಿ ಹೂಡಿಕೆಗೆ ಅವಕಾಶ. |

### ಪಾವತಿ ಶಿಲ್ಕು & ವಿದೇಶಿ ವಿನಿಮಯ ನಿಧಿ

- ಪ್ರಪಂಚದ ಇತರೆ ದೇಶಗಳ ಜೊತೆ ಒಂದು ದೇಶದ ಸಮಗ್ರ ಆರ್ಥಿಕ ವಿನಿಮಯವನ್ನು (ಸ್ವಿಕೃತಿಗಳು & ಸಂದಾಯಗಳ ಪಟ್ಟಿ) ಯನ್ನು ಪಾವತಿ ಶಿಲ್ಕು ಎಂದು ಕರೆಯುತ್ತಾರೆ.
- ಪಾವತಿ ಶಿಲ್ಕಿನಲ್ಲಿ ಹೆಚ್ಚಳ & ಕೊರತೆಯು ಆ ದೇಶದ ಆರ್ಥಿಕತೆಯ ಸಾಮರ್ಥ್ಯವನ್ನು ತಿಳಿಸುತ್ತದೆ.

ಭಾರತದ ಪಾವತಿ ಶಿಲ್ಕಿನ ಚಿತ್ರಣ ಹೀಗಿದೆ.




- ಪಾವತಿ ಶಿಲ್ಕಿನ ವಿಪರೀತ ಕೊರತೆಯಾದಾಗ **'ರೂಪಾಯಿ ಅಪಮೌಲ್ಯೀಕರಣ'** ಮಾಡಿ ರಫ್ತನ್ನು ಹೆಚ್ಚಿಸುವ ಕಾರ್ಯನೀತಿ ಮಾಡಲಾಗುತ್ತದೆ.

**ಅಪಮೌಲ್ಯೀಕರಣದ ಅವಧಿಗಳು.**

1. 1949 ಬ್ರಿಟಿಷರ ಅವಧಿಯಲ್ಲಿ ಭಾರತವು ಸಿದ್ಧ ವಸ್ತುಗಳ ಮಾರುಕಟ್ಟೆಯಾದ್ದರಿಂದ, ಹೆಚ್ಚಿನ ಲಾಭ ಗಳಿಸಲು ಬ್ರಿಟಿಷರು ರೂಪಾಯಿಯ ಮೌಲ್ಯವನ್ನು ಹೆಚ್ಚಿಸಿದ್ದರು. ಆದ್ದರಿಂದ ಸ್ವಾತಂತ್ರ್ಯ ನಂತರ ಆಮದು ವಸ್ತುಗಳ ಮೌಲ್ಯವನ್ನು ತಗ್ಗಿಸಲು ರೂಪಾಯಿ ಅಪಮೌಲ್ಯ ಮಾಡಲಾಯಿತು.
2. 1966 ಚೀನಾ & ಪಾಕಿಸ್ತಾನ ಯುದ್ದದ ನಂತರ ಉಂಟಾದ ಆರ್ಥಿಕ ಬಿಕ್ಕಟ್ಟಿನಿಂದ.
3. 1991 ಗಲ್ಫ್ ಬಿಕ್ಕಟ್ಟು & 1990 ರ ಆರ್ಥಿಕ ಮುಗ್ಗಟ್ಟಿನಿಂದ ಭಾರತದ ವಿದೇಶಿ ವಿನಿಮಯ ನಿಧಿ 0.91 ಬಿಲಿಯನ್ ಡಾಲರ್ ಗೆ ಇಳಿದಾಗ ಹೊಸ ಆರ್ಥಿಕ ನೀತಿಯಿಂದ ರೂಪಾಯಿ ಅಪಮೌಲ್ಯ ಮಾಡಲಾಯಿತು.

**ಭಾರತದ ವಿದೇಶಿ ನೀತಿಯಲ್ಲಾದ ಬದಲಾವಣೆಗಳು:–**

❖ **ಹೊಸ ಆರ್ಥಿಕ ನೀತಿ 1991**

ವ್ಯಾಪಾರಿ ಶಿಲ್ಕಿನ ಕೊರತೆ & ಆರ್ಥಿಕ ಬಿಕ್ಕಟ್ಟುಗಳಿಂದ ತಟಸ್ಥವಾಗಿದ್ದ ಭಾರತದ ಆರ್ಥಿಕತೆಯನ್ನು ಅಭಿವೃದ್ಧಿಯೆಡೆಗೆ ಕೊಂಡೊಯ್ಯಲು ಹೊಸ ಆರ್ಥಿಕ ನೀತಿಯನ್ನು ಜಾರಿಗೆ ತರಲಾಯಿತು ಹೊಸ ವ್ಯಾಪಾರಿ ನೀತಿಗಳು, ರಫ್ತು ಪ್ರೋತ್ಸಾಹ, ಪರವಾನಿಗೆ ಪಡೆಯುವಿಕೆ, ವಿದೇಶ ವಿನಿಮಯ ದೊರಕಿಸಿ ಕೊಡುವುದು, ಉತ್ಪಾದನೆ, ಮಾರುಕಟ್ಟೆ ಮೊದಲಾದ ಅಂಶಗಳನ್ನು ಒಳಗೊಂಡಿದ್ದವು.

**ಉದಾರಿಕರಣ, ಖಾಸಗೀಕರಣ, ಜಾಗತೀಕರಣ:–**

**ಉದಾರಿಕರಣ:–**

- ಅರ್ಥವ್ಯವಸ್ಥೆಯ ಮೇಲಿನ ನಿರ್ಭಂದ & ನಿಯಂತ್ರಣಗಳನ್ನು ಕಡಿಮೆ ಮಾಡಿ, ಉದ್ಯಮಿ ಸ್ನೇಹಿ ವಾತಾವರಣ ಕಲ್ಪಿಸುವುದು ಇದರ ಮುಖ್ಯ ಧ್ಯೇಯವಾಗಿದೆ.

**ಖಾಸಗೀಕರಣ:–**

- ಸ್ವಾತಂತ್ರ್ಯಾನಂತರ ನೆಹರು– ಫ್ಯಾಬಿಯನ್ ಸಮಾಜವಾದಿ ತತ್ವದಂತೆ ಕೇವಲ ಸರ್ಕಾರಿ ಉದ್ಯಮಿಗಳಿಗೆ ಅವಕಾಶ ಕೊಟ್ಟು ಖಾಸಗಿ ಕೈಗಾರಿಕೆಗಳನ್ನು ನಿರ್ಲಕ್ಷಿಸಿದ್ದರು. ನಂತರ 1990 ರ ಆರ್ಥಿಕ ಮುಗ್ಗಟ್ಟಿನ ಸಮಯದಲ್ಲಿ, ಹಣಕಾಸಿನ ಹೂಡಿಕೆ & ಬಂಡವಾಳ ಸಮಚಯನಕ್ಕಾಗಿ ಸಾರ್ವಜನಿಕ ಒಡೆತನದ ಉದ್ಯಮಗಳಲ್ಲಿ (PSU) ಖಾಸಗೀಕರಣಕ್ಕೆ ಅವಕಾಶ ಮಾಡಿ ಕೊಡಲಾಗಿದೆ. ಹೂಡಿಕೆ ಹಿಂಪಡೆತನ (Disinvestment) ಮೂಲಕ ಖಾಸಗೀಕರಣವನ್ನು ಸಾಧಿಸಲಾಗಿದೆ

**ಜಾಗತೀಕರಣ:–**

- ಹೊಸ ಆರ್ಥಿಕ ನೀತಿಯನ್ನು ಜಾರಿಗೋಳಿಸುವಾಗ, IMF & World Bank ನ ಸಲಹೆಯಂತೆ ಭಾರತದ ಆರ್ಥಿಕತೆಯನ್ನು ಜಾಗತೀಕರಣಗೊಳಿಸಲಾಯಿತು.
- ಆಮದುಗಳನ್ನು ಮೇಲಿದ್ದ ನಿರ್ಭಂದಗಳನ್ನು ಸಡಿಲಗೊಳಿಸಲಾಯಿತು.
- ಹೆಚ್ಚಿನ ದರದ ವ್ಯಾಪಾರ ಸುಂಕಗಳನ್ನು ತಗ್ಗಿಸಲಾಯಿತು.

**ರಫ್ತು ವೃದ್ಧಿ:–**

- ರಫ್ತು ಸಹಾಯಕ ಕೈಗಾರಿಕೆಗಳಿಗೆ ಹೆಚ್ಚಿನ ಮಟ್ಟದ ಕಚ್ಚಾವಸ್ತುಗಳನ್ನು ನೀಡುವುದು
- ರಫ್ತುಗಳಿಕೆಗಳಿಗೆ ಆದಾಯ ತೆರಿಗೆ ವಿನಾಯತಿ ಸರಕುಗಳಿಗೆ ಮಾರಾಟ ತೆರಿಗೆ ವಿನಾಯತಿ
- ಮಾರುಕಟ್ಟೆ ನಿಧರಿತ ವಿನಿಮಯ ದರಗಳನ್ನು ಪರಿಚಯಿಸುವುದು

- ರಫ್ತುಗಳ & ಆಮದುಗಳ ಮೇಲಿದ್ದ ಪರಿಮಾಣಾತ್ಮಕ ನಿರ್ಭಂದಗಳ ನಿರ್ಮೂಲನೆ ಮಾಡಲಾಗಿದೆ.
- ಆಮದುಗಳ ಮಟ್ಟವನ್ನು ನಿಯಂತ್ರಿಸಿ, ಕೇವಲ ಅತ್ಯಾವಶ್ಯಕ ವಸ್ತುಗಳನ್ನು ಮಾತ್ರ ವಿದೇಶಗಳಿಂದ ಆಮದು ಮಾಡಿಕೊಳ್ಳುವ ಪ್ರಮುಖ ಧ್ಯೆಯವಿರುವ **'ಆಮದು ನೀತಿ'**
- ರಫ್ತು ಸಂಸ್ಕರಣ ವಲಯಗಳು:– ರಫ್ತು ಉತ್ತೇಜನಕ್ಕಾಗಿ ಸರಕುಗಳಿಗೆ ಸುಂಕ ಮುಕ್ತ ಪರಿಸರ ಒದಗಿಸಿ, ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಲೆ & ಗುಣಮಟ್ಟ ಎರಡಲ್ಲೂ ಸ್ಪರ್ಧಾತ್ಮಕ ಪರಿಸರ ಒದಗಿಸುವುದು.

**ಕರ್ನಾಟಕದ ರಫ್ತುಗಳು**

- ಪುರಾತನ ಕಾಳದಿಂದಲೂ ಕರ್ನಾಟಕದಲ್ಲಿ ವಿದೇಶಿ ವ್ಯಾಪಾರವು ನಡೆಯುತ್ತಾ ಬಂದಿದೆ. ಪುರಾತನ ಕಾಲದ ಪ್ರಮುಖ ರಫ್ತುಗಳು ಕಾಫಿ, ಮಸಾಲೆ ಪದಾರ್ಥಗಳು, ರೇಷ್ಮೇ, ಗೋಡಂಬಿ, ಕರಕುಶಲ ವಸ್ತುಗಳು ಇತ್ಯಾದಿ. ಕಳೆದ 20 ವರ್ಷಗಳಲ್ಲಿ ರಾಜ್ಯವು ವಿದೇಶಿ ವ್ಯಾಪಾರದಲ್ಲಿ ಅಪಾರ ಪ್ರಗತಿಯನ್ನು ಸಾಧಿಸಿದ್ದು, ರಾಷ್ಟ್ರೀಯ ಉತ್ಪನ್ನಕ್ಕೆ ಮಹತ್ವದ ಕೊಡುಗೆ ನೀಡುತ್ತಿದೆ.
- ಕರ್ನಾಟಕ ರಫ್ತು ಸಾಧನೆ (2016–17) ಕೋಟಿ ರೂಗಳಲ್ಲಿ

| ಸರಕುಗಳು | 2016–17 |
|---|---|
| 1. ಎಲೆಕ್ಟ್ರಾನಿಕ್ಸ್ & ಕಂಪ್ಯೂಟರ್ ಸಾಫ್ಟವೇರ್ (61.41%) | 202483 |
| 2. ರತ್ನ ಆಭರಣಗಳು (10.14%) | 16540 |
| 3. ಇಂಜಿನಿಯರಿಂಗ್ ಉತ್ಪನ್ನಗಳು (6.29%) | 14616 |
| 4. ಸಿದ್ಧ ಉಡುಪುಗಳು (4.43%) | 6864 |
| 5. ಪೆಟ್ರೋಲಿಯಮ್ ಹಾಗೂ ಪೆಟ್ರೋಲಿಯಮ್ ಉತ್ಪನ್ನಗಳು (3.67%) | 2844 |

- ಎಲೆಕ್ಟ್ರಾನಿಕ್ಸ್ & ಕಂಪ್ಯೂಟರ್ ಸಾಫ್ಟವೇರ್ ರಫ್ತಿನಲ್ಲಿ ದೇಶದ ಒಟ್ಟು ರಫ್ತಿನಲ್ಲಿ ಕರ್ನಾಟಕದ ಪಾಲು 36.96%

**ರಫ್ತು ಅಭಿವೃದ್ಧಿಗೆ ಕರ್ನಾಟಕ ಸರ್ಕಾರ ಕೈಗೊಂಡ ನೀತಿಗಳು:–**

- ಕೈಗಾರಿಕಾ ನೀತಿ 2014–19
- ಕರ್ನಾಟಕ ರಾಜ್ಯ ಖನಿಜ ನೀತಿ– 2008
- ಕರ್ನಾಟಕ ನವೀಕರಿಸಬಹುದಾದ ಇಂದನ ನೀತಿ – 2009
- ಕರ್ನಾಟಕ ವಿಷೇಶ ಆರ್ಥಿಕ ವಲಯ ನೀತಿ 2009
- ಕರ್ನಾಟಕ ಪ್ರವಾಸೊದ್ಯಮ ನೀತಿ
- ಕರ್ನಾಟಕ ಜವಳಿ ನೀತಿ 2013–18
- ಕರ್ನಾಟಕ  ಐ4 ನೀತಿ 2014 ಇನ್ನು ಹಲವಾರು.

❖ **ಆಮದು ಮತ್ತು ರಫ್ತು ಸಂಯೋಜನೆ**

- ಒಂದು ದೇಶದ ಆಮದು & ರಫ್ತುಗಳ ಪ್ರಮಾಣ & ಸ್ಥಿತಿಗಳನ್ನು ಅಧ್ಯಯನ ಮಾಡುವುದರಿಂದ ಆ ದೇಶದಲ್ಲಿ ಕೊರತೆ ಇರುವ ವಸ್ತುಗಳು ಹೆಚ್ಚಾಗಿ ರಫ್ತು

ಆಗುವ ವಸ್ತುಗಳ ಸ್ಪಷ್ಟ ಚಿತ್ರಣ ದೊರಕಿ ದೇಶದ ಆರ್ಥಿಕ ಸಾಮರ್ಥ್ಯ & ಆರ್ಥಿಕ ಸ್ಥಿರತೆಯನ್ನು ತಿಳಿಯಬಹುದು.

**ಆಮದು ಸಂಯೋಜನೆ:–**

- ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ **'ಕೈಗಾರಿಕೆ'** ಯನ್ನು ಮೂಲ ಆದ್ಯತೆಯನ್ನಾಗಿ ಸ್ವಿಕರಿಸಿದಾಗ, ದೇಶದಲ್ಲಿ ಬೃಹತ್ ಕೈಗಾರಿಕೆಗಳ ಸ್ಥಾಪನೆಗಳಾದವು. ಈ ಕೈಗಾರಿಕೆಗಳಿಗೆ ಬೇಕಾದ ಅಗತ್ಯ ಕಚ್ಚಾವಸ್ತುಗಳು & ಬಿಡಿ ಭಾಗಗಳನ್ನು ಉತ್ಪಾದಿಸುವಷ್ಟು ಸಾಮರ್ಥ್ಯ ಭಾರತದಲ್ಲಿ ಇಲ್ಲದಿದ್ದರಿಂದ ಹೆಚ್ಚಿನ ಪ್ರಮಾಣದಲ್ಲಿ ಆಮದುಗಳಿಗೆ ನಾಂದಿಯಾಯಿತು.

**ಪ್ರಮುಖ ಆಮದುಗಳು:–**

1. **ಪೆಟ್ರೋಲಿಯಂ ಉತ್ಪನ್ನಗಳು–** ಭಾರತದ ವಿದೇಶಿ ವಿನಿಮಯದ ೪ ಭಾಗವನ್ನು ಪೆಟ್ರೋಲಿಯಂ ಉತ್ಪನ್ನಗಳ ಆಮದಿಗಾಗಿ ವ್ಯಯಿಸಲಾಗುತ್ತದೆ.
2. **ಬೆಲೆ ಬಾಳುವ ಹರಳುಗಳು:–** ಭಾರತದಲ್ಲಿ ರತ್ನ & ಆಭರಣಗಳಿಗಾಗಿ ಇರುವ ಬೇಡಿಕೆಯಿಂದ ಇವುಗಳ ಆಮದು ಅಗತ್ಯವಾಗಿದೆ.
3. **ಬಂಡವಾಳ ಸರಕುಗಳು–** ವಿದ್ಯುತ್ತೇತರ & ವಿದ್ಯತ್ ಯಂತ್ರಗಳು, ಸಾರಿಗೆ & ಯಂತ್ರಗಳ ಉಪಕರಣಗಳು, ಇನ್ನು ಮುಂತಾದವು.
4. **ಕಬ್ಬಿಣ ಮತ್ತು ಉಕ್ಕು–** ದೇಶಿಯ ಉತ್ಪನ್ನವೂ ಹೆಚ್ಚಿಸಿದ್ದರೂ, ಆಂತರಿಕ ಬೇಡಿಕೆಯನ್ನು ಎದುರಿಸುವ ಸಲುವಾಗಿ ಆಮದು
5. **ಆಹಾರ ಧಾನ್ಯಗಳು:–** ನಿರಂತರವಾಗಿ ಹೆಚ್ಚುತ್ತಿರುವ ಬೇಡಿಕೆ ಪೂರೈಕೆಗೆ ಖಾದ್ಯತೈಲಗಳು.

**ರಫ್ತು ಸಂಯೋಜನೆ:–**

- ಸ್ವಾತಂತ್ರ್ಯಾನಂತರ ಕೈಗಾರಿಕೆಗಳಿಗೆ ಕೊಟ್ಟ ಮಹತ್ವ & 1991 (LPG) ಹೊಸ ಆರ್ಥಿಕ ನೀತಿಯಿಂದ ಹಲವಾರು ಸರಕುಗಳ ಉತ್ಪಾದನೆ & ರಫ್ತು ಹೆಚ್ಚಾಗಿದೆ. ರಫ್ತುಗಳಲ್ಲಿ ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ರಫ್ತುಗಳು ಎಂದು 2 ಭಾಗಗಳಿದ್ದು ಸಾಂಪ್ರದಾಯಿಕ ಸರಕುಗಳ ಮೇಲಿನ ಅವಲಂಬನೆ ಕಡಿಮೆಯಾಗಿದೆ.

**ಪ್ರಮುಖ ರಫ್ತುಗಳು:–**

1. **ಇಂಜಿನಿಯರಿಂಗ್ ಸರಕುಗಳು–** ಪಂಚವಾರ್ಷಿಕ ಯೋಜನೆಗಳಲ್ಲಿ ಕೈಗಾರಿಕಾ ಪ್ರೋತ್ಸಾಹದ ಕ್ರಮದ ಫಲವಾಗಿ ಒಂದು ಕಾಲದಲ್ಲಿ ಇಂಜಿನಿಯರಿಂಗ್ ಸರಕುಗಳ ಮೇಲೆ ಅತಿಯಾಗಿ ಅವಲಂಬಿಸಿದ್ದ ಭಾರತವು ಇಂದು ಈ ಸರಕುಗಳ ಪ್ರಮುಖ ರಫ್ತಿನ ರಾಷ್ಟ್ರವಾಗಿದೆ.
2. **ಕರಕುಶಲ ವಸ್ತುಗಳು–** ಭಾರತದ ಒಟ್ಟು ರಫ್ತಿನಲ್ಲಿ ಕರಕುಶಲ ವಸ್ತುಗಳ ಪಾಲು 2.5% ಇದೆ.

3. **ಬೆಲೆಬಾಳುವ ಹರಳು & ಆಭರಣಗಳು**
4. **ಸೆಣಬು ಪದಾರ್ಥಗಳು–** ಪ್ರಸ್ತುತ ವಿದೇಶಿ ಬೇಡಿಕೆ ಕುಸಿದಿದೆ
5. **ಟೀ–** ಜಗತ್ತಿನಲ್ಲಿಯೇ ಹೆಚ್ಚು ಟೀ ರಫ್ತು ಮಾಡುವ ರಾಷ್ಟ್ರ
6. ಸಿ**ದ್ದ ಉಡುಪುಗಳು–** ಭಾರತದ ಕಚ್ಚಾಹತ್ತಿ & ಸಿದ್ದ ಉಡುಪುಗಳಿಗೆ ಉತ್ತಮ ಬೇಡಿಕೆ.
7. **ರಾಸಾಯನಿಕಗಳು, ಚರ್ಮದ ಸರಕುಗಳು, ಅದಿರುಗಳು, ಸಾಂಬಾರ ಪದಾರ್ಥಗಳು,** ಹೀಗೆ ಇನ್ನು ಹಲವಾರು.